**2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು**

| | |
|---|---|
| ಎಸ್ ಸಿ : | 268/**21** |

| | | |
|---|---|---|
| ಸಾಕ್ಷಿದಾರರ ಹೆಸರು | **ಶಿವಣ್ಣ** | |
| ತಂದೆಯ ಹೆಸರು | **ದೊಂಬಯ್ಯಾ** | ಸಾಕ್ಷಿಗೆ ದಿಃ **25.11.2022** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **42 ವರ್ಷ** | |
| ಉದ್ಯೋಗ | **ಕೂಲಿ ಕೆಲಸ** | ಪಿ.ಡಬ್ಲ್ಯೂ **-02** |
| ವಾಸ ಸ್ಥಳ | **ಮೂಗೂರು ಗ್ರಾಮ, ಟಿ.ನರಸೀಪುರ ತಾಲ್ಲೂಕು.** | ಸಿ.ಡಬ್ಲ್ಯೂ **-03** |

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ನನಗೆ ಫ್ರಾಸ್-1 ಇವರ ಪರಿಚಯ ಇರುತ್ತದೆ. ಚಾಸ್-2 ಮತ್ತು ಚಾಸ್-4 ಇವರ ಪರಿಚಯಸ್ಥರು ಇರುತ್ತಾರೆ. ನನಗೆ ಆರೋಪಿತನ ಪರಿಚಯ ಇರುತ್ತದೆ. ಫ್ರಾಸ್-1 ರವರ ತಾಯಿ ಭಾಗ್ಯಲಕ್ಷ್ಮೀ ಇವರು ಪರಿಚಯಸ್ಥರು ಇದ್ದರು. ಸದರಿ ಭಾಗ್ಯಲಕ್ಷ್ಮೀ ಇವರು ಕೊಲೆಯಾಗಿ ಮೃತಪಟ್ಟಿರುತ್ತಾರೆ. ಸುಮಾರು ಒಂದು ವರ್ಷ, 4 ತಿಂಗಳ ಹಿಂದೆ ನಾನು ಕೂಲಿ ಮಾಡಲು ಹೋಗಿ ಸಾಯಂಕಾಲ 5.00 ಗಂಟೆಗೆ ಮನೆಗೆ ಬಂದೆನು. ಭಾಗ್ಯಲಕ್ಷ್ಮೀ ಇವರ ಕೊಲೆಯಾಗಿದೆ ಎಂದು ಜನರು ಮಾತನಾಡುತ್ತಿದ್ದರು, ನಾನು ಹೊಸಹಳ್ಳಿ ಕಾಲುವೆ ಹತ್ತಿರ ಶವ ಇದೆ ಎಂದು ನಾನು ಕೂಡಾ ಅಲ್ಲಿಗೆ ನೋಡಲು ಹೋಗಿದ್ದೆ, ಆಗ ಸುಮಾರು 5.30 ಗಂಟೆ ಆಗಿತ್ತು. ನಾನು ಮತ್ತು ರಾಜೇಶ್ ಕಾಲುವೆಯಿಂದ ಶವವನ್ನು ತೆಗೆದು ದಂಡೆಗೆ ಹಾಕಿದೆವು, ನಾನು ಶವವನ್ನು ನೋಡಿದಾಗ ಕುತ್ತಿಗೆಯ ಮುಂಭಾಗದಲ್ಲಿ ಕತ್ತರಿಸಿದ ಗಾಯ ಇತ್ತು, ಎಡಗಡೆ ಮುಖಕ್ಕೆ, ಕಣ್ಣಿಗೆ ಹಾಗೂ ಹಿಂದಿನ ಭಾಗದ ತಲೆಗೆ ಹರಿದ ಗಾಯಗಳು ಆಗಿದ್ದವು, ಸ್ಥಳದಲ್ಲಿ ಪೊಲೀಸರು ಇದ್ದರು, ಪೊಲೀಸರು ಸ್ಥಳದಲ್ಲಿ ಪಂಚನಾಮೆ ಮಾಡಿ ಸ್ಥಳ ಪಂಚನಾಮೆಯ ಮೇಲೆ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಸ್ಥಳದಲ್ಲಿ ಪೊಲೀಸರು ಪಂಚನಾಮೆಯ ಕಾಲಕ್ಕೆ ಒಂದು ಕೊಡೆ, ರಕ್ತ ಮೀಶ್ರಿತ ಮಣ್ಣು, ಒಂದು ಜೊತೆ ಚಪ್ಪಲಿ

ಯನ್ನು ವಶಪಡಿಸಿಕೊಂಡಿರುತ್ತಾರೆ. ಸ್ಥಳದ ಪಂಚನಾಮೆ ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುದ್ದೆಮಾಲುಗಳನ್ನು ಗುರುತಿಸಿದ್ದು, ರಕ್ತದ ಕಲೆಯಾಗಿರುವ ಗಿಡಗಂಟೆ ಮತ್ತು ಉದ್ದನೇಯ ತಲೆಕೂದಲು ಮೀಶ್ರಿತ ಗಿಡಗಂಟೆಗಳು ಈಗಾಗಲೇ ಎಂ.ಓ-1, ಎಂದು ಗುರುತಿಸಲಾಗಿದೆ. ಬಳೆ ಚೂರುಗಳು ಈಗಾಗಲೇ ಎಂ.ಓ-2, ಎಂದು ಗುರುತಿಸಲಾಗಿದೆ. ಒಂದು ಜೊತೆ ಚಪ್ಪಲಿ ಈಗಾಗಲೇ ಎಂ.ಓ-3, ಎಂದು ಗುರುತಿಸಲಾಗಿದೆ. ಒಂದು ಕೊಡೆಯನ್ನು ಈಗಾಗಲೇ ಎಂ.ಓ-4, ಎಂದು ಗುರುತಿಸಲಾಗಿದೆ. ಸ್ಯಾಂಪಲ್‌ಗಾಗಿ ಮಾದರಿ ಮಣ್ಣು ಈಗಾಗಲೇ ಎಂ.ಓ-5, ಎಂದು ಗುರುತಿಸಲಾಗಿದೆ. ರಕ್ತ ಮೀಶ್ರಿತ ಮಣ್ಣು ಈಗಾಗಲೇ ಎಂ.ಓ-6, ಎಂದು ಗುರುತಿಸಲಾಗಿದೆ. ಶವದ ಮುಖದ ಮೇಲೆ ಗೋಣಿ ಚೀಲ್ ಇತ್ತು, ಸದರಿ ಗೋಣಿ ಚೀಲ್ ಈಗಾಗಲೇ ಎಂ.ಓ-7, ಎಂದು ಗುರುತಿಸಲಾಗಿದೆ. ಸ್ಥಳದ ಪಂಚನಾಮೆಯನ್ನು ಪೊಲೀಸರು ಸಾಯಂಕಾಲ 7.00 ಗಂಟೆಯಿಂದ 9.15 ಗಂಟೆಯ ವರೆಗೆ ಬ್ಯಾಟರಿ ಮತ್ತು ಪೊಲೀಸ್ ಜೀಪ್ ನ ಹೆಡ್ ಲೈಟ್ ನ ಬೆಳಕಿನಲ್ಲಿ ಪಂಚನಾಮೆ ಮಾಡಿರುತ್ತಾರೆ. ಪೊಲೀಸರು ಪಂಚನಾಮೆಗೆ ಬರಬೇಕು ಎಂದು ನನಗೆ ನೋಟಿಸ್ ಕೊಟ್ಟಿರುತ್ತಾರೆ ಹಾಗೂ ಪಂಚನಾಮೆಯ ಕಾಲಕ್ಕೆ ಪೋಟೋ ತೆಗೆದಿರುತ್ತಾರೆ. ಶವವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದರು. ಪೋಟೋಗಳು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳು ಈಗಾಗಲೇ ನಿಪಿ-3 ರಿಂದ ನಿಪಿ-5 ಎಂದು ಗುರುತಿಸಲಾಯಿತು.

ಸಮಯ ಕೇಳಿದ್ದರಿಂದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು